25

# ಎರಡು ಮಾರ್ಗಗಳು

## (ಪರ್ವತ ಪ್ರಸಂಗ, 2)

### ಓದುವ ಮನೆಪಾಠ #9

V. ಎರಡನೇ ಪಸ್ಕದಿಂದ, ಮೂರನೆಯದಕ್ಕೆ (ಮುಂದುವರೆಯುವದು).
   F. ಪರ್ವತ ಪ್ರಸಂಗ (ಮುಂದುವರೆಯುವದು).
      6. ಲೋಕದ ಕಷ್ಟಗಳ ನಡುವೆ, ಪರಲೋಕದ ಆಸ್ತಿಯು ಉಂಟೆಂಬ ಭರವಸೆ (ಮತ್ತಾಯ 6:19-34).
      7. ತೀರ್ಪಿನ ಕುರಿತ ಬೋಧನೆ (ಮತ್ತಾಯ 7:1-6; ಲೂಕ 6:37-42).
      8. ಪ್ರಾರ್ಥನೆ ಕುರಿತ ಬೋಧನೆ (ಮತ್ತಾಯ 7:7-11).
      9. ಒಂದು ಅಮೂಲ್ಯವಾದ ನಿಯಮ (ಮತ್ತಾಯ 7:12; ಲೂಕ 6:31).
      10. ಎರಡು ಮಾರ್ಗಗಳು - ಸುಳ್ಳು ಪ್ರವಾದಿಗಳು (ಮತ್ತಾಯ 7:13-23; ಲೂಕ 6:43-45).
      11. ಸಮಾರೋಪ ಮತ್ತು ಅನ್ವಯ (ಇಬ್ಬರು ಮನೆಕಟ್ಟುವವರು) (ಮತ್ತಾಯ 7:24-29; ಲೂಕ 6:46-49).

### ಪೀಠಿಕೆ

ಜಾನ್ ಸ್ಟಾಟ್ ಹೀಗೆ ಬರೆಯುತ್ತಾರೆ,

> ಪರ್ವತ ಪ್ರಸಂಗವು ಯೇಸುವಿನ ಬೋಧನೆಗಳಲ್ಲಿಯೇ ಎಲ್ಲರಿಗೂ ಚೆನ್ನಾಗಿ ತಿಳದಿರುವ ಭಾಗ ಎನ್ನಬಹುದಾಗಿದ್ದು, ಚರ್ಚೆಯಿಂದಾಗಿ ಅತ್ಯಲ್ಪವಾಗಿ ಅರಿತುಕೊಳ್ಳಲ್ಪಟ್ಟ ಮತ್ತು ವಿರಳವಾಗಿ ಅನುಸರಿಸಲ್ಪಟ್ಟಂತದ್ದು ಆಇದೆ. ತನ್ನ ಹಿಂಬಾಲಕರು ಹೇಗೆ ಇರ ಬೇಕು ಮತ್ತು ಏನು ಮಾಡಬೇಕೆಂದು ಹೇಳುವ/ತಿಳಿಸುವ ಪ್ರನಾಳಿಕೆಯಂತಿದೆ.[1]

ಈ ಸ್ಟಾನ್ಲಿ ಜೋನ್ಸ್ "ಆಧುನಿಕ ಕ್ರೈಸ್ತತ್ವಕ್ಕೆ ಇರುವ ಅವಶ್ಯಕತೆ ಎಂದರೆ ಪ್ರಾಯೋಗಿಕ ರೀತಿ ಯಲ್ಲಿ ಜೀವಿಸಲು ಪರ್ವತ ಪ್ರಸಂಗವನ್ನು ಪುನರ್ ಸಂಶೋಧನೆ ಮಾಡುವುದೇ ಆಗಿದೆ" ಎಂದು ಹೇಳುತ್ತಾರೆ.[2] ಹ್ಯಾರಿ ಸ್ಕಾಟ್ ಮತ್ತಾಯ 5-7ನ್ನು "ಕ್ರೈಸ್ತರ ಸಂವಿಧಾನ" ಎಂದು ಕರೆಯುತ್ತಾರೆ.[3]

ಒಂದು ನಾವು ನೂರು ಪುಸ್ತಕಗಳನ್ನು ಈ ಪರ್ವತ ಪ್ರಸಂಗದ ಮೇಲೆ ಬರೆದಿದ್ದಾದರೆ, ಅದರ ಬೋಧನೆಗಳು ಮುಗಿದುಹೋಗುವದಿಲ್ಲ. ಈ ಸರಣಿಯಲ್ಲಿ ನಾವು ಮಾಡಬಹುದಾದ ಸಂಗತಿಗಳನ್ನು ನಾವು ಸಂಕ್ಷಿಪ್ತವಾಗಿ ನೋಡುವುದಷ್ಟೇ ಆಗಿದೆ. ಇದರಲ್ಲಿನ ಅಡಕಗಳು ವಿವರವಾಗಿ ಕಾಣಲು ನಾವೆಲ್ಲ ಇದನ್ನು ಸರಣಿಗಳನ್ನಾಗಿ ಮಾಡಬಹುದು. ಈ ಪುಸ್ತಕದಲ್ಲಿ ಈ ಹಿಂದೆ ಸಿಕ್ಕುವ "ನಾನು ನಿನಗೆ ಹೇಳುತ್ತೇನೆ" ಎಂಬ ಅಧ್ಯಯನವು, ಅರ್ಧದಷ್ಟು ಪ್ರಸಂಗದವನ್ನು ಸಮೀಕ್ಷೆ ಮಾಡಿದೆ; ಈ ಪಾಠವು ನಂತರದ ಅರ್ಧಭಾಗವನ್ನು ಪುನರಾವಲೋಕಿಸಲಿದೆ.

ಈ ಪ್ರಸಂಗವು ವ್ಯತ್ಯಾಸಗಳಿಂದ ತುಂಬಿಕೊಂಡಿದೆ. ಮೊದಲರ್ಧವು ಯೆಹೂದಿಗಳು ಏನನ್ನು ಬೋಧಿಸುತ್ತಾರೆ ಮತ್ತು ಯೇಸು ಏನನ್ನು ಬೋಧಿಸುತ್ತಾನೆ ಎಂಬವುಗಳ ಮಧ್ಯದ

ವ್ಯತ್ಯಾಸದ ಚಿತ್ರಣವಾಗಿದೆ. ಎರಡನೆಯ ಅರ್ಥವು ಒಬ್ಬ ಮನುಷ್ಯನು ತಾನು ಹೋಗಲು ಆರಿಸಿಕೊಳ್ಳಬಹುದಾದ ಎರಡು ಮಾರ್ಗಗಳ ಮಧ್ಯದ ವ್ಯತ್ಯಾಸವನ್ನು ಲಕ್ಷಣಗಳನ್ನು ನೋಡುವುದಾಗಿದೆ. ಕ್ರಿಸ್ತನು ತನ್ನ ಕೇಳುಗರಿಗೆ ಹೀಗೆ ಒತ್ತಿ ಹೇಳಿದನು: "ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ[4] ನಾಶಕ್ಕೆ ಹೋಗುವ ಬಾಗಿಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹುಜನ. ನಿತ್ಯ ಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ" (7:13, 14). ಮತ್ತಾಯ 6:19-7:27 ನಾವು ಪ್ರಯಾಣಿಸಬಹುದಾದ ಎರಡು ಮಾರ್ಗಗಳ ಬಗೆಗೆ ಇದೆ ... . ಜೀವಿತವನ್ನು ನಡೆಸುವ ಅಥವಾ ನಿರ್ಮಾಣ ಮಾಡುವಂತ ಆಯ್ಕೆಗಳು ಎಂದು ನಾವು ಮಾಡಿಕೊಳ್ಳಲೇಬೇಕಾದ ಆಯ್ಕೆಗಳೊಡನೆ ಈ ವೇದಭಾಗವು ನಮ್ಮ ಎದುರಿಗೆ ಇರಿಸುವುದಾಗಿದೆ.

## ಭೂಲೋಕ ಅಥವಾ ಪರಲೋಕ (ಮತ್ತಾಯ 6:19-24)

ಈ ಅಧ್ಯಯನದ ಮೊದಲ ಭಾಗವು ಈಗಾಗಲೇ ಸೂಚಿಸಲಾದ ಅನೇಕ ವೈದೃಶ್ಯ ಗಳನ್ನು ಒಳಗೊಂಡಿದೆ. ಮತ್ತಾಯ 6:19-21ರಲ್ಲಿ, ಈ ಜಗತ್ತಿನಲ್ಲಿ ಐಶ್ವರ್ಯವನ್ನು ಹೊಂದಿರುವುದರ ಮತ್ತು ಮೇಲೆ ಪರಲೋಕದಲ್ಲಿ ಸಂಪತ್ತನ್ನು ಕೂಡಿಡುವವರ ಮಧ್ಯದ ವೈದೃಷ್ಯವಾಗಿದೆ. ವಚನಗಳು 22 ಮತ್ತು 23ರಲ್ಲಿ ಬೆಳಕಿನಿಂದ ತುಂಬಿರುವದು ಮಧ್ಯದ ವ್ಯತ್ಯಾಸವನ್ನು ನಾವು ನೋಡಿದೆವು. ದೇವರು ಮತ್ತು ಧನ ಎಂಬ ಸಾಧ್ಯತೆಯಿರುವ ಸಂಗತಿಗಳ ಬಗೆಗೆ ವಚನ 24 ನಮಗೆ ಹೇಳುತ್ತದೆ. ಎಲ್ಲಾ ಈ ಮೂರು ವೈದೃಶ್ಯಗಳು ಒಂದೇ ಅಂಶಕ್ಕೆ ಸಂಬಂಧಿಸಿವೆ. ಅದು ನೀವು ನಿಮ್ಮ ಮಮತೆಯನ್ನು ಭೂಮಿಯ ಮೇಲೆ ಇಡುವವರಾಗಿದ್ದೀರಾ ಅಥವಾ ಪರಲೋಕ ಕೇಂದ್ರಿಕೃತವಾಗಿಯೋ?

### ಸಂಪತ್ತು (ವಚನಗಳು 19-21)[5]

ಭೂಲೋಕದಲ್ಲಿ ಗಂಟನ್ನು ಮಾಡಿಟ್ಟುಕೊಳ್ಳಬೇಡಿರಿ, ಅದರ ಬದಲಾಗಿ ಪರಲೋಕದಲ್ಲಿ ಗಂಟುಮಾಡಿಟ್ಟುಕೊಳ್ಳಿರಿ ಎಂದು ಯೇಸು ತನ್ನ ಶಿಷ್ಯರಿಗೆ ಸವಾಲನ್ನೊಡ್ಡಿದನು.[6] ಭೂಲೋಕದ ಎಲ್ಲಾ ಸಂಪತ್ತು ಕೆಟ್ಟುಹೋಗುವವು[7] - ಪರಲೋಕದಲ್ಲಿರುವ ಸಂಪತ್ತು ಎಂದೆಂದಿಗೂ ಇರುವುದಾಗಿದೆ ಎಂದು ಆತನು ಒತ್ತಿ ಹೇಳಿದನು (ವಚನಗಳು 19, 20).

ಭವಿಷ್ಯಕ್ಕಾಗಿ ತಿರುಗಿಬೀಳುವದಕ್ಕೆ ಯೋಗ್ಯವಾಗಿರುವ ಸಂಗತಿಗಳು ಯೇಸುವಿನದಾಗಿರಲಿಲ್ಲ, ಆದರೆ ಬದಲಾಗಿ ತನ್ನಲ್ಲಿಯೇ ಕೊನೆಗೊಳ್ಳು ವಂತ ಕೂಡಿಡಲ್ಪಟ್ಟ ಆಸ್ತಿಯನ್ನು ಆತನು ಖಂಡಿಸುವವನಾಗಿದ್ದಾನೆ. ಆತನ ಪ್ರಾಥಮಿಕ ಕಳಕಳಿಯು ವ್ಯಕ್ತಿಯ ಆಧ್ಯತೆಯ ಜೊತೆಗಿರುವುದೇ ಆಗಿದ್ದು "... ನಿನ್ನ ಗಂಟು ಇದ್ದಲ್ಲಿಯೇ, ನಿನ್ನ ಮನಸ್ಸು ಇರುವದು" (ವಚನ 21). ನಿನ್ನ ಮನಸ್ಸು ಎಲ್ಲಿರುವದೋ ಅಲ್ಲಿಯೇ ನಿನ್ನ ಸಂಪತ್ತು ಸಹ ಇರುವದು ಎಂಬುದು ನಿಜವಾಗಿದೆ.

### ಕಣ್ಣುಗಳು (ವಚನಗಳು 22, 23)[8]

ಆ ದಿನಗಳಲ್ಲಿ ಜನಪ್ರಿಯವಾದ ಉಪಮೆಗಳನ್ನು ಉಪಯೋಗಿಸುವುದರ ಮೂಲಕ ಸರಿಯಾದ ಆಧ್ಯತೆಗಳ ಮಹತ್ವಗಳನ್ನು ಯೇಸು ದೃಷ್ಟಾಂತೀಕರಿಸುತ್ತಿದ್ದನು: ಕಣ್ಣುಗಳ ಉಪಯೋಗವು ಒಬ್ಬನ ಹೃದಯದ ಮನೋಧರ್ಮದ ಮೇಲೆ ನಿಲ್ಲುವುದಾಗಿದೆ. "ದಯಾದೃಷ್ಟಿಯುಳ್ಳವನು [ಅಕ್ಷರ ಸಹ ಹೇಳಬೇಕೆಂದರೆ 'ಒಳ್ಳೆಯ ಕಣ್ಣುಳ್ಳವನು'[9]] ಆಶೀರ್ವಾದ ಪಡೆಯುವನು" (ಜ್ಞಾನೋಕ್ತಿ 22:9). ಲೋಭಿಯು (ಕೆಟ್ಟ ಕಣ್ಣುಳ್ಳವನು) ಆಸ್ತಿಯನ್ನು ಗಳಿಸಲು ಆತುರಪಡಪನು (ಜ್ಞಾನೋಕ್ತಿಗಳು 28:22) ಎಂದು ಹಳೆಯ ಒಡಂಬಡಿಕೆಯು ಬೋಧಿಸುವುದಾಗಿದೆ.[10] ದೇಹಕ್ಕೆ ಕಣ್ಣೂ ಹೇಗೋ, ಹಾಗೆಯೇ ಪ್ರಾಣಕ್ಕೆ

ಆತ್ಮವೂ ಆಗಿದೆ.[11] ನಾವು ಅದೇ ವಿಶೇಷಣವನ್ನು ಇಂದು ಉಪಯೋಗಿಸಲಾರೆವು, ಆದರೆ ಜೀವತದೆಡೆಗೆ ನಾವು: ನೋಡುವ ರೀತಿಗೆ ಸಮವಾದ ಒಂದು ಎಂಬ ಬಗೆಗೆ ನಾವು ಮಾತನಾಡಬಲ್ಲೆವು.

ಕ್ರಿಸ್ತನ ದೃಷ್ಟಾಂತವು ಸರಳವಾದದ್ದಾಗಿತ್ತು: ಒಬ್ಬ ಮನುಷ್ಯನ ದೈಹಿಕ ಕಣ್ಣು ಸರಿಯಾಗಿದ್ದಾದರೆ, ಆತನು "ಬೆಳಕಿನಿಂದ ತುಂಬಿರುತ್ತಾನೆ"; ಆದರೆ ಆತನ ಕಣ್ಣು ಕುರುಡಾಗಿದ್ದಾದರೆ ಆತನು "ಕತ್ತಲೆಯಿಂದ ತುಂಬಿದವನಾಗಿರುತ್ತಾನೆ." ಅದರಂತೆಯೇ, ಒಬ್ಬ ಮನುಷ್ಯನ ಹೃದಯವು ಒಳ್ಳೆಯದಾಗಿದ್ದರೆ (ಈ ಸಂದರ್ಭದಲ್ಲಿ ಪರಲೋಕ ಕೇಂದ್ರೀಕೃತವಾಗಿದ್ದರೆ), ಆತನು ಆತ್ಮೀಕ ಬೆಳಕಿನಿಂದ ತುಂಬಿದವನಾಗಿರುತ್ತಾನೆ; ಆದರೆ ಆತನ ಹೃದಯವು ಕೆಟ್ಟದ್ದಾಗಿದ್ದಾದರೆ (ಅದು, ಇಹಲೋಕ ಕೇಂದ್ರಿಕೃತವಾಗಿದ್ದಲ್ಲಿ), ಆತನು ಆತ್ಮಿಕ ಕತ್ತಲೆಯಿಂದ ತುಂಬಿದವನಾಗಿರುತ್ತಾನೆ.

**ಒಡೆಯರು (ವಚನ 24)**[12]

ದೇವರಿಗೆ ಸೇವೆ ಮಾಡುವುದಾಗಿರಬಹುದು ಅಥವಾ ಇಹಲೋಕಕ್ಕೆ ದಾಸರಾಗಿರುವುದಾಗಿರಬಹುದು ನಮ್ಮಲ್ಲಿ ಪ್ರತಿಯೊಬ್ಬರೂ ಇವುಗಳಲ್ಲಿ ನಮ್ಮ ಜೀವಿತದಲ್ಲಿ ಯಾವುದು ಹೆಚ್ಚು ಪ್ರಾಮುಖ್ಯವಾದುದು ಎಂದು ನಿರ್ಧರಿಸಿರುತ್ತೇವೆ - ಆದರೆ ನಾವು ಎರಡನ್ನೂ ಜೊತೆಯಾಗಿಯೇ ಮಾಡಲಾರೆವು. ನಾವು ದೇವರು ಮತ್ತು ಸಂಪತ್ತು ಇವುಗಳ ಮಧ್ಯ ಆಯ್ಕೆಯನ್ನು ಮಾಡಿಕೊಳ್ಳಬೇಕು. "ಧನದ ಲೋಭ"ದಲ್ಲಿ ಬಳಕೆಯಾದ ಪದವು ವಸ್ತುಗಳ ಶ್ರೀಮಂತಿಕೆ ಎಂಬ ಪದಕ್ಕೆ ಸಾಮನ್ಯವಾಗಿ ಕಣಿಹೇಳುವ ಪದವಾಗಿದೆ.[13]

## ಚಿಂತೆ ಅಥವಾ ನಂಬಿಕೆ (ಮತ್ತಾಯ 6:25-34)

ಈ ಸಮಸ್ತ ಪ್ರಸಂಗದಲ್ಲಿನ ಮುಂದಿನ ಭಾಗವು ಬಲು ಮುಖ್ಯವಾದ ಒಂದು ಪ್ರಾಯೋಗಿಕವಾಗಿದೆ (ಮತ್ತು ಜಾಗತಿಕವಾಗಿ ಬಲು ಅವಶ್ಯವಾದದ್ದು ಆಗಿದೆ). ಇದು ಪಾಪದ ಚಿಂತೆಯ ವಿಷಯದ ಮೇಲೆ ಇರುವುದಾಗಿದೆ. ನೀವು ಎಂದಾದರು ಚಿಂತಿಸಿದ್ದಾದರೆ, ನಿಮ್ಮ ತಲೆಯನ್ನು ತೂಗಿರಿ. ನಿಮಗೆ ಅದು ಇನ್ನೂ ನೆನಪಿನಲ್ಲಿದುದಾದರೆ ನನಗೆ ದೊಡ್ಡ ಆಶ್ಚರ್ಯವಾಗಬಹುದು. ನನ್ನ ವೈಯಕ್ತಿಕ ಪಾಪಗಳ ಪಟ್ಟಿಯಲ್ಲಿ ಚಿಂತೆಯು ಪ್ರಮುಖವಾದದ್ದಾಗಿದೆ.

ಮತ್ತಾಯ 6:25-34ರ ಹಿಂದಿನ ವಚನವಾದ "ನಿಮ್ಮ ಪ್ರೀತಿಯು ಈ ಭೂಲೋಕವನ್ನು ಕೇಂದ್ರವಾಗಿಟ್ಟಿದ್ದಾದರೆ, ನೀವು ಚಿಂತೆ ಮಾಡುವಿರಿ. ಯಾರು ಪರಲೋಕದ ಮೇಲೆ ದೃಷ್ಟಿಯಿಡುವರೋ ಅವರಿಗೆ ಚಿಂತೆ ಮಾಡುವ ಅವಶ್ಯವಿಲ್ಲ" ಎಂಬ ವಚನದೊಡನೆ ಹತ್ತಿರದಲ್ಲಿ ಜೋಡಿಸಲ್ಪಟ್ಟಿದೆ. ಜಾನ್ ಫ್ರಾಂಕ್ಲಿನ್ ಕಾರ್ಟರ್ ಅವರು ಚಿಂತೆಯ ಬಗೆಗಿನ ಪರಿಚ್ಛೇದವನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ ...

1. ಅನವಶ್ಯಕವಾದದ್ದು ಯಾಕೆಂದರೆ ... ದೇವರು ಪಕ್ಷಿಗಳಿಗೆ ಆಹಾರವನ್ನು ಮತ್ತು ಹೂವುಗಳಿಗೆ ಸುವಾಸನೆಯನ್ನೂ ಒದಗಿಸುತ್ತಿರುವುದರಿಂದಲೇ ಆತನು ತನ್ನ ಸೇವಕರ ಅವಶ್ಯಕತೆಗಳನ್ನು ನಿತ್ಯವೂ ಒದಗಿಸುವವನಾಗಿದ್ದಾನೆ (ವಚನಗಳು 26, 28-30).
2. ಅದು ನಿರರ್ಥಕವಾದದ್ದು ಯಾಕೆಂದರೆ ಕೇವಲ ಚಿಂತೆ ಮಾಡುವುದರಿಂದ ಯಾವ ಅಂತಸ್ತು ಅಲ್ಲಿ ಸೇರದು, ಅದು ಯಾವುದೇ ಇತರ ಅವಶ್ಯಕವಾದ ಪ್ರಯೋಜನಗಳನ್ನೂ ಉತ್ಪಾದಿಸುವದೂ ಇಲ್ಲ (ವಚನ 27).
3. ಸ್ಥಾನಪಲ್ಲಟ ಮಾಡುವುದು (ಅಸಮಂಜಸವಾದುದು), ಯಾಕೆಂದರೆ ಕ್ರೈಸ್ತರಿಗೆ

ಊಟಕ್ಕಿಂತ ಪ್ರಾಣವು ಮತ್ತು ... ದೇಹವು ಆಭರಣಕ್ಕಿಂತ ಹೆಚ್ಚಾಗಿದೆ. ಅದಲ್ಲದೆ, ಈ ಸಂಗತಿಗಳ ಬಗೆಗೆ ಚಿಂತೆ ಮಾಡುವುದರ ಮೂಲಕ ತನ್ನನ್ನು ಅನ್ಯರ ಗುಂಪಿಗೆ ಸೇರಿಸಿದಂತಾಗುತ್ತದೆ (ವಚನಗಳು 25, 32).[14]

"ಎಲೈ ಅಲ್ಪ *ವಿಶ್ವಾಸಿಗಳೇ*" (ವಚನ 30ಬಿ) ಎಂಬ ಯೇಸುವಿನ ಚಿಂತೆಯ ವಿವರಣೆಯಲ್ಲಿ ಚಿಂತೆಯನ್ನು ಜಯಸುವ ರಹಸ್ಯವು ಸೂಚಿಸಲ್ಪಟ್ಟಿದೆ. ಚಿಂತೆಗೆ ಪರಿಹಾರದ ಮಂತ್ರವು ನಂಬಿಕೆಯು ಆಗದೆ; ಇದು ನಮ್ಮ ಅವಶ್ಯಕತೆಯನ್ನು ಬಲ್ಲ ದೇವರಲ್ಲಿ ನಂಬಿಕೆಯಾಗಿದೆ (ವಚನ 32) ಹಾಗಾ ನಾವು "ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡುವ"[15] ನಮ್ಮ ಜೀವನದ ಅವಶ್ಯಕತೆಗ ಳನ್ನು ಕೊಡುವಾತನು ಆಗಿದ್ದಾನೆ (ವಚನ 33). ದೇವರು ದೇವರೇ ಆಗಿರುವುದರಿಂದ ಆತನು ಬಲ್ಲವನಾಗಿದ್ದಾನೆ. ಆತನು ನಮ್ಮ ತಂದೆ ಆಗಿರುವಾತನಾಗಿದ್ದು ಆದ್ದರಿಂದ ಆತನು ನಮ್ಮನ್ನು ಕಾಯುವವನಾಗಿದ್ದಾನೆ.[16]

ಯೇಸು ಭವಿಷ್ಯತ್ತಿನ ವಿರುದ್ಧವಾಗಿ ಬೋಧನೆಯನ್ನು ಮಾಡಲಿಲ್ಲ. ನ್ಯಾಯ ಸಮ್ಮತವಾದ ಕಳಕಳಿಗೂ, ಮತ್ತು ನಮ್ಮ ಶಕ್ತಿಯನ್ನು ಸತ್ವಯುತ ಮಾಡುವ ಹಾಗೂ ಭವಿಷ್ಯದ ಸವಾಲುಗಳನ್ನು ಕಡಿಮೆ ಸಾಮರ್ಥ್ಯವನ್ನು ಒಪ್ಪಿಸಿಬಿಡುವ ನಿರ್ಲಕ್ಷದ ಪೀಡಿಸುವಿಕೆಯ ಮಧ್ಯ ಭಿನ್ನತೆಯು ಇದೆ. ಯೇಸು ಮುಂದಾಗಿ ಯೋಜನೆಯನ್ನು ಹಾಕಿಕೊಳ್ಳುವುದನ್ನು ವಿರೋಧಿಸುತ್ತಿಲ್ಲ;[17] ಮನೆವಾರ್ತೆಯವರ ತತ್ವವು[18] ನಾಳೆಗಾಗಿ ನಾವು ಉತ್ತಮರಾಗುವಂತೆ ಪ್ರೇರೇಪಿಸುವುದಾಗಿದೆ. ಹೇಗೋ ಒಂದು ಸಾರಿ ಅದನ್ನು ನಾವು ಮಾಡಿದ್ದಾದರೆ, ಆ ವಿಷಯವನ್ನು ದೇವರ ಕೈಗೆ ಒಪ್ಪಿಸತಕ್ಕದ್ದು ಮತ್ತು ಚಿಂತೆ ಮಾಡಬಾರದು.

## ನ್ಯಾಯತೀರ್ಪು ಅಥವಾ ವಿವೇಚನೆ (ಮತ್ತಾಯ 7:1-6; ಲೂಕ 6:37-42)

ಯೇಸು ಭೌತಿಕ ಸಂಗತಿಗಳ ಬಗೆಗೆ ಶಿಷ್ಯರ ಮನೋಭಾವನೆಯನ್ನು ಇತರ ಬಗೆಗಿನ ಮನೋಭಾವನೆಯೆಡೆಗೆ ತಿರುಗಿಸಿದನು. ಮತ್ತಾಯ 7:1-5 ತೀರ್ಪುಮಾಡುವ ಸಂಗತಿಗಳನ್ನು ಖಂಡಿಸುವುದಾಗಿದೆ.[19] ಈ ಪರಿಚ್ಛೇದವು ಯಾವುದೇ ತೀರ್ಪನ್ನು ವಿರೋಧಿ ಸುವುದಾಗಿದೆ ಎಂದು ಕೆಲವರು ಯೋಚಿಸುವುದುಂಟು, ಆದರೆ ಯೇಸು "ಬುದ್ಧಿಯುಳ್ಳ ಮನುಷ್ಯನ ಹಾಗೆ" ಎಂದು ಹೇಳುವಂತೆ (ಮತ್ತಾಯ 7:24). ನ್ಯಾಯ ತೀರ್ಪನ್ನು ಅವಶ್ಯವಾಗಿಸುವುದನ್ನು ಎತ್ತಿತೋರುವ ನಮ್ಮ ಒಂದು ವೇದ ಭಾಗವು ಮತ್ತಾಯ 7:6 ಹೇಳುವಂತೆ "ದೇವರ ವಸ್ತುವನ್ನು ನಾಯಿಗೆ" ಹಾಕದಿರುವದು; ಅಥವಾ "ಮುತ್ತುಗಳನ್ನು ಹಂದಿಯ ಮುಂದೆ" ಚಲ್ಲದಿರುವುದು ನಾವು ಬೋಧಿಸುವಂತವುಗಳು ಒಳ್ಳೆಯ ನ್ಯಾಯತೀರ್ಪನ್ನು ಬಳಸುವುದನ್ನು ಒಳಗೊಂಡಿದೆ ಎಂದು ಹೇಳುವವುಗಳು ಆಗಿವೆ. ಮತ್ತಾಯ 7ರ ವಚನ 1ರಿಂದ 6ರವರೆಗೆ ವಚನಗಳನ್ನು ಹಾಗೆಯೇ ತೆಗೆದುಕೊಳ್ಳಲಾಗಿದೆ. ಯೇಸು ಎಲ್ಲಾ ನ್ಯಾಯತೀರ್ಪುಗಳನ್ನು ನಿಷೇಧಿಸಿಲ್ಲ ಎಂಬುದು ಇದರಿಂದ ಪ್ರಕಟವಾಗುತ್ತದೆ, ಆದರೆ ಬದಲಾಗಿ ಖಾರವಾಗಿ ಶಪಿಸುವುದು, ನಿಷ್ಟುರವಾದ ಹಾಗೂ ಕರುಣೆಯಿಲ್ಲದ ಆತ್ಮವನ್ನು ನಿಷೇಧಿಸುತ್ತಾನೆ.

ಲೂಕನ ಪ್ರಸಂಗದ ಈ ವಿವರಣೆಯಲ್ಲಿ, ಅಂಧರಿಗಾಗಿ ಅಂಧ ನಾಯಕರ ಮತ್ತು ಅವರ ಶಿಷ್ಯರ ಬಗೆಗೆ ವ್ಯಾಖ್ಯೆಯನ್ನು ಯೇಸು ಸೇರಿಸಿದ್ದಾನೆ (ಲೂಕ 6:39).[20] ನಂತರದಲ್ಲಿ ಯೇಸು ಫರಿಸಾಯರನ್ನು "ಕುರುಡನು ಕುರುಡನಿಗೆ ದಾರಿ ತೋರಿಸುವ" (ಮತ್ತಾಯ 15:12, 14) ಎಂಬಂತೆ ಸೂಚಿಸುವವನಾಗಿದ್ದಾನೆ ಕ್ರಿಸ್ತನು ಫರಿಸಾಯರನ್ನು ಮತ್ತು ಇತರರೆಡೆಗೆ ಫರಿಸಾಯರ ಮನೋಭಾವವನ್ನು ಹೊಂದಿರುವ ಪ್ರತಿಯೊಬ್ಬರನ್ನೂ ದೂರುವವನಾಗಿದ್ದಾನೆ.

## ಗಲಿಬಿಲಿ ಅಥವಾ ಪ್ರಾರ್ಥನೆ (ಮತ್ತಾಯ 7:7-11)

(ವಿಧೇಯತೆಯ ಸೂಚನೆಯೊಂದಿಗೆ) ಯೇಸು ಪ್ರಸಂಗವನ್ನು ಸಮಾರೋಪಗೊಳಿಸುವ

ಮುನ್ನ, ತನ್ನ ಕೇಳುಗರು ಎದುರಿಸಲು ಸಮರ್ಥವಾಗುವ ಸವಾಲುಗಳನ್ನು ಅವರ ಮುಂದೆ ಇರಿಸುವ ಎರಡು ಸಾಮಾನ್ಯ ಭಾಗಗಳನ್ನು ಸೇರಿಸಿದನು. ಈ ಪರಿಚ್ಛೆದಗಳಲ್ಲಿ ವ್ಯತ್ಯಾಸವು ಹೇಳಲ್ಪಟ್ಟಿಲ್ಲ, ಆದರೆ ಅವುಗಳು ಸೂಚ್ಯವಾಗಿವೆ. ಮೊದಲನೆಯದು (ಮತ್ತಾಯ 7:7-11) ಹಠದ ಸ್ವಭಾವದ ಪ್ರಾರ್ಥನೆಯ ಶಕ್ತಿಯ ಮೇಲಿದೆ. ಇದು ಚಿಂತೆಯ ಮೇಲಿನ ಭಾಗದ ಮುಂದುವರೆಕೆಯ ವಿಚಾರವೇ ಆಗಿದೆ; ಒಂದು ವೇಳೆ ಶಿಷ್ಯರು ನಾಳಿನ ಬಗೆಗೆ ಚಿಂತಿಸದೇ ಹೋಗುವುದಾದರೆ, ಅವರು ಏನನ್ನು ಮಾಡಬೇಕು? ಅವರು ಪ್ರಾರ್ಥಿಸಬೇಕು. 7ರಿಂದ 11 ರವರೆಗೆ ವಚನಗಳು ಮಾನವನ ಸಂಬಂಧದ ಮಧ್ಯಬರುವವುಗಳು ಆಗಿವೆ (7:1-6 ಮತ್ತು 7:12). ಪ್ರಾರ್ಥನೆಯು ಜನರ ಜೊತೆಗೆ ಬರಲು ಅವಶ್ಯವಾದದ್ದಾಗಿದೆ ಎಂದು ಈ ಪರಿಚ್ಛೇದವು ನಮಗೆ ತಿಳಿಸುವುದಾಗಿದೆ.[21] ಈ ವೇದಭಾಗವನ್ನು ಇಡಿಯಾಗಿ (ಮತ್ತು ಸೂಚಿತವಾದ ವ್ಯತಾಸಗಳನ್ನು) ಸಮಾ ರೋಪಗೊಳಿಸಲು, ನಾನು ಈ ಭಾಗಕ್ಕೆ ತಲೆಬರಹಕ್ಕೋಸ್ಕರ "ಗಲಿಬಿಲಿ" ಎಂಬ ಪದವನ್ನು ಬಳಸಿದ್ದೇನೆ: ಭವಿಷ್ಯಕ್ಕೋಸ್ತರ ಅಥವಾ ಸಂಬಂಧಿಗಳಿಗಾಗಿ ಅಥವಾ ಇತರ ಯಾವುದೇ ಆತ್ಮಿಕ ಸವಾಲುಗಳಿಗಾಗಿ ಗಲಿಬಿಲಿಗೊಳುವ ಬದಲು, ನಂಬಿಕೆಯಿಡಿರಿ ಮತ್ತು ಪ್ರಾರ್ಥಿಸಿರಿ.

ವಚನ 7 ಮತ್ತು 8ರಲ್ಲಿನ ಮುಖ್ಯ ವಚನಗಳು, "ಕೇಳು," "ಎದುರು ನೋಡು" ಮತ್ತು "ತಟ್ಟು" ಸೂಚಿತವಾದ ಪದಗಳ ಕ್ರಮವು ನಮ್ಮ ಪ್ರಾರ್ಥನೆಯ ತೀವ್ರತೆಯನ್ನು ಹೆಚ್ಚಿಸುವುದನ್ನು ಸೂಚಿಸುವವುಗಳು ಆಗಿವೆ. ಮೂಲ ವೇದ ಭಾಗಗಳೂ ಸಹ ವರ್ತಮಾನಕಾಲದಲ್ಲಿ ಬಳಸಲ್ಪಟ್ಟಿದ್ದು, ನಿರಂತರವಾದ ಕೇಳುವಿಕೆ, ನಿರಂತರವಾದ ಎದುರುನೋಡುವಿಕೆ, ನಿರಂತರವಾದ ತಟ್ಟುವಿಕೆ ಎಂಬವುಗಳು (ನಿರಂತರವಾಗಿ) ಮುಂದುವರೆಯುವುದನ್ನು ಸೂಚಿಸುವವುಗಳು ಆಗಿವೆ. ಪ್ರಾರ್ಥನೆಯಲ್ಲಿ ಸಾಧಿಸುವ ಸ್ವಭಾವವನ್ನು ಹೊಂದುವ ಅವಶ್ಯಕತೆಯು ಇರುವುದನ್ನು ಯೇಸು ಒತ್ತಿ ಹೇಳಿದ್ದಾನೆ.[22]

ನಾವು ಪ್ರಾರ್ಥನೆಯಲ್ಲಿ ಯಾಕೆ ಹಟದ ಸ್ವಭಾವವನ್ನು ಹೊಂದಿರಬೇಕು? ಯಾಕೆಂದರೆ ನಾವು ನಮ್ಮನ್ನು ಪ್ರೀತಿಸುವ ಮತ್ತು ನಮ್ಮ ಪ್ರಾರ್ಥನೆಗೆ ಉತ್ತರವನ್ನು ಕೊಡುವ ದೇವರನ್ನು ಹೊಂದಿದ್ದೇವೆ.[23] ಇಹಲೋಕದ ತಂದೆಯು ತಮ್ಮ ಮಕ್ಕಳಿಗೆ ಒದಗಿಸುವ ಬಗೆಗಿನ ದೃಷ್ಟಾಂತವದ ಮೂಲಕ ಕ್ರಿಸ್ತನು ಇದಕ್ಕೆ ಒತ್ತುಕೊಟ್ಟಿದ್ದಾನೆ (ವಚನಗಳು 9, 10). ಹೀಗಿದ್ದಾಗ, ಪರಲೋಕದಲ್ಲಿರುವ ನಮ್ಮ ತಂದೆಯು ನಮಗಾಗಿ ಒದಗಿಸಲಾರೆನೇ (ವಚನ 11).[24]

"ನೀವು ಬೇಡಿಕೊಳ್ಳದ ಕಾರಣ ನಿಮಗೇನೂ ದೊರೆಯಲಿಲ್ಲ" ಎಂದು ಯಾಕೋಬನು ಬರೆಯುತ್ತಾನೆ (ಯಾಕೋಬ 4:2) ಜೀವಿತದಲ್ಲಿ ಯಾವುದೇ ಸವಾಲುಗಳು ಬಂದರೂ ಯೇಸು ನಮ್ಮಿಂದ ತೆಗೆದುಕೊಳ್ಳುತ್ತಾನೆ. "... ದೇವರನ್ನು ಕೇಳಿಕೊಳ್ಳಿರಿ ... ಎಲ್ಲರಿಗೂ ಉದಾರಮನಸ್ಸಿನಿಂದ ಕೊಡುವವನಾಗಿದ್ದಾನೆ" (ಯಾಕೋಬ 1:5).

## ನನಗಾಗಿಯೋ ಅಥವಾ ಇತರರಿಗಾಗಿಯೋ (ಮತ್ತಾಯ 7:12; ಲೂಕ 6:31)

ಮುಂದಿನ ಭಾಗವು ಒಂದೇ ಒಂದು ವಚನದಲ್ಲಿದೆ. ಈ ವಿಚಾರವು ನಂತರದ ಪ್ರಸಂಗದ ಭಾಗದೊಂದಿಗೆ ಒಳಗೊಂಡಿದ್ದಾಗ್ಯೂ, ಇದು ಒಂದೇ ಆಗಿ ಪಟ್ಟಿಮಾಡುವಷ್ಟು ಮಹತ್ವದ್ದಾಗಿದೆ. "... ಜನರು ನಿಮಗೆ ಏನು ಮಾಡಬೇಕೆಂದು ಅಪೇಕ್ಷಿಸುತ್ತಿರೋ ಅದನ್ನೇ ನೀವು ಅವರಿಗೆ ಮಾಡಿರಿ" (ಮತ್ತಾಯ 7:12) ಎಂಬ ಬಂಗಾರದ ನಿಯಮ ಎಂದು ಸಾಮಾನ್ಯವಾಗಿ ಕರೆಯಲ್ಪಡುವ ತತ್ವವನ್ನು ಈ ವಚನವು ಪ್ರತಿಪಾದಿಸುವುದಾಗಿದೆ.[25]

ಈ ಮುಂಚೆ ನೋಡಿದಂತೆ, ಇಲ್ಲಿನ ವ್ಯತ್ಯಾಸವು ನಿಖರವಾಗಿ ಹೇಳುವ ಬದಲು ಸೂಚ್ಯವಾಗಿ ಹೇಳಲ್ಪಟ್ಟಿದೆ. ಅದನ್ನು ನಾವು ಸರಳವಾಗಿ ಗುರುತಿಸಬಹುದು. ನಾವು ಇತರರೊಡನೆ ವ್ಯವಹರಿಸುವಾಗ ಹಲವುಬಾರಿ ನಮಗೆ ಏನು ಬೇಕು ಎಂಬದರ ಬಗ್ಗೆ ಕಾಳಜಿಯುಳ್ಳವರಾಗಿದ್ದು "ನಮ್ಮ ಸಂಬಂಧಕ್ಕಾಗಿ ಇದು ಅಥವಾ ಅದು ನನಗೆ ಅವಶ್ಯವಾಗಿದೆ" ನಾವು ಹೇಳುತ್ತೇವೆ.

ಬಂಗಾರದ ನಿಯಮವು ಸ್ವಾರ್ಥತೆಯಿಂದ ಸ್ವಾರ್ಥತೆಯನ್ನು ಮರೆಮಾಡುವತ್ತ ನಮ್ಮನ್ನು ನಡೆಸುವುದಾಗಿದೆ. ಇನ್ನೊಬ್ಬ ವ್ಯಕ್ತಿಗೆ ಏನು ಅವಶ್ಯವಿದೆಯೋ ಅದನ್ನು ಗಮನಿಸಬೇಕು ಎಂದು ಇದು ನಮಗೆ ಮೊದಲು ಸವಾಲೊಡ್ಡೊವುದಾಗಿದೆ. "ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತಿರೋ, ಅಂಥದ್ದನ್ನೇ ನೀವು ಅವರಿಗೆ ಮಾಡಿರಿ" (ಲೂಕ 6:31; NIV). ಎಂಬ ಈ ಎಲ್ಲವುಗಳು ಕರ್ತನ ಮಾತುಗಳಲ್ಲಿ ವ್ಯಕ್ತವಾಗುವವು ಆಗಿವೆ.

"ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ" ಎಂದು ಯೇಸು ಹೇಳಿದನು (ಮತ್ತಾಯ 7:12). ಒಂದು ವೇಳೆ ಸಂಕ್ಷಿಪ್ತವಾಗಿ ಹೇಳುವುದಾದರೆ ಧರ್ಮಶಾಸ್ತ್ರವನ್ನು ಮತ್ತು ಪ್ರವಾದಿಗಳನ್ನು ಕ್ರೂಢಿಕರಿಸುವುದಾದರೆ ನಮಗೆ ಕೊನೆಯದಾಗಿ ಬಿಡಲ್ಪಡುವದು ಇಷ್ಟೇ.[26] "ಹೇಗೋ ಜನರು ನಿಮಗೆ ಏನು ಮಾಡಬೇಕೆನ್ನೂತ್ತೀರೋ ಅದನ್ನೇ ನೀವೂ ಅವರಿಗೆ ಮಾಡಿರಿ."

## ಅಳಿವು ಅಥವಾ ಜೀವಿತ (ಮತ್ತಾಯ 7:13, 14)

ಯೇಸು ಮತ್ತಾಯ 7:13ರಲ್ಲಿನ ಪದಗಳಿಂದ ತನ್ನ ಪ್ರಸಂಗವನ್ನು ತುಂಬಿಸಲು ಪ್ರಾರಂಭಿಸುತ್ತಾನೆ. ಪ್ರಸಂಗದ ಸಮಾರೋಪದ ಪದಗಳು ಸುಳ್ಳುಬೋಧನೆಗಳ ವಿರುದ್ಧದ ಎಚ್ಚರಿಕೆಯ ಸಂಗತಿಗಳಿಂದ ಕೂಡಿದೆ (ಮತ್ತಾಯ 7:15-20), ಆದರೆ ಮೂಲತಹವಾಗಿ ಕ್ರಿಸ್ತನು ಕಲಿಸಿದಂತಹ ತತ್ವಗಳು ಆತನ ಶಿಷ್ಯರ ಜೀವಿತದ ಬಗೆಗೆ ಕಳಕಳೆಯುಳ್ಳವುಗಳು ಆಗಿವೆ. ತನ್ನ ಪ್ರಸಂಗಗಳು ಬಿರುದುಗಳ ಮತ್ತು ಮೆಚ್ಚುಗೆಯ ಮೇಲೆ ಅಚ್ಚೊತ್ತಿದಂತಾಗಿರಬೇಕೆಂದು ಯೇಸು ಯೋಚಿಸುವವನಾಗಿರಲಿಲ್ಲ. ಬದಲಾಗಿ ಅದು ತನ್ನ ಹಿಂಬಾಲಕರ ಜೀವಿತದ ಮೂಲಕವ್ಯಾಪಿಸಬೇಕೆಂಬುದು ಆತನ ಇಚ್ಛೆಯಾಗಿತ್ತು.

ವಚನ 13 ಮತ್ತು 14ರ ವ್ಯತ್ಯಾಸವು ನಿಶ್ಚಿತವಾದದ್ದಾಗಿದೆ. ಅಲ್ಲಿ ನಮ್ಮಲ್ಲಿ ಪ್ರತಿಯೊಬ್ಬರೂ ಹೋಗಬಹುದಾದ ಎರಡು ಮಾರ್ಗಗಳಿವೆ ಮತ್ತು ಕೇವಲ ಎರಡು ಮಾರ್ಗಗಗಳಿವೆ: ಇಕ್ಕಟ್ಟಾದ ಮಾರ್ಗವು ಜೀವಿತದೆಡೆಗೆ ನಡೆಸುವುದಾಗಿದೆ, ಮತ್ತು ಅಗಲವಾದ ಮಾರ್ಗವು ವಿನಾಶದೆಡೆಗೆ ನಡೆಸುವುದಾಗಿದೆ.[27] ಇಕ್ಕಟ್ಟಾದ ಮಾರ್ಗವು ಕ್ಲಿಷ್ಟಮಯವಾದ ದಾರಿಯನ್ನು ಹೊಂದಿದೆ, ಮತ್ತು ಕೇವಲ "ಕೆಲವರು" ಮಾತ್ರ ಅದರಲ್ಲಿ ಪ್ರಯಾಣಿಸುವ ತ್ಯಾಗದ ಅವಶ್ಯಕತೆಗೆ ಒಪ್ಪುವವರಾಗಿರುತ್ತಾರೆ. ಅಗಲವಾದ ಮಾರ್ಗವು ಸುಲಭವಾದ ಮಾರ್ಗವೂ, ಜನಪ್ರಿಯವಾದ ಮಾರ್ಗವೂ, "ಅನೇಕರಿಂದ" ಆರಿಸಲ್ಪಡುವ ಮಾರ್ಗವೂ ಆಗಿದೆ. (ಈ ಅಪ್ರಿಯವಾದ ಸತ್ಯವನ್ನು ಎದುರಿಸುವುದನ್ನು ಅನೇಕರು ಮೆಚ್ಚಲಾರರು, ಆದರೆ ಯೇಸುವಿನ ಮಾತುಗಳ ಅರ್ಥವು ಯಾವುದೇ ಆಗಿದ್ದಾದರೆ, ಅನೇಕರು ಕಳೆಹೋಗುವುದಕ್ಕಿಂತ ರಕ್ಷಿಸಲ್ಪಡುತ್ತಾರೆ ಎಂದು ಅವುಗಳು ಬೋಧಿಸುವವುಗಳು ಆಗಿವೆ.)

ಇಕ್ಕಟ್ಟಾದ ಮಾರ್ಗವನ್ನು ನಾವು ಹೇಗೆ ಪಡೆಯಬಹುದು? ಈ ಪ್ರಶ್ನೆಗೆ ಯೇಸು ಈ ಮುಂದಿನ ವಚನದಲ್ಲಿದ್ದಂತೆ ಉತ್ತರಿಸುವವನಾಗಿದ್ದಾನೆ: "ಆತನು ನಮಗೆ ಹೇಳಿದ್ದಕ್ಕೆ ವಿಧೇಯರಾಗುವುದರಿಂದಲೇ" (ಮತ್ತಾಯ 7:21-27). ಅದರಂತೆಯೇ ಮಹತ್ವವಾದದ್ದೆಂದರೆ, ಇಕ್ಕಟ್ಟಾದ ಮಾರ್ಗದಲ್ಲಿ ನಾವು ಹೇಗೆ ನೆಲೆಗೊಳ್ಳಬಹುದು? ಇಕ್ಕಟ್ಟಾದ ಮಾರ್ಗದ ಮೇಲಿರುವದಕ್ಕಾಗಿ ಬಿಟ್ಟುಬಿಡುವದು ಅಸದ್ಯವಾದದ್ದು ಎಂದು ಹೊಸ ಒಡಂಬಡಿಕೆಯು ಬೋಧಿಸುವುದಿಲ್ಲ (ನೋಡಿರಿ 1 ಕೊರಿಂಥ 10:12; ಯಾಕೋಬ 5:19, 20). ದುಃಖದಾಯಕವಾದದ್ದೆಂದರೆ, ಇಕ್ಕಟ್ಟಾದ ಮಾರ್ಗದ ಒಂದಕ್ಕಿಂತ ಹೆಚ್ಚು ಪ್ರಯಾಣಿಕರು ಅದರ ವಿಶಾಲತೆಯ ನಿರ್ಭಂಧಗಳನ್ನು ಮತ್ತು ಸ್ವೇಚ್ಛಾಚಾರದ ವ್ಯತರಿಕ್ತಗಳನ್ನು ಸರಳ ಮಾರ್ಗದೆಡೆಯಲ್ಲಿ ಪ್ರಯತ್ನಿಸಿರುತ್ತಾರೆ. ಇಕ್ಕಾಟ್ಟಾದ ಮಾರ್ಗದಲ್ಲಿ ನಾವು ಹೇಗೆ ಇರಬಹುದು? ಯೇಸುವಿನ ಆಜ್ಞೆಗಳಿಗೆ ವಿಧೇಯರಾಗುವ ಮೂಲಕವೇ. (ಪುನರಾವರ್ತಿಸಿ ಮತ್ತಾಯ 7:24-27.)

ನಾವು ಯಾವುದೇ ಮಾರ್ಗದಲ್ಲಿ ಪ್ರಯಾಣಿಸಿದರೂ ಯಾವ ವ್ಯತ್ಯಾಸವು ಆಗುವದು? ಒಂದು ಜೀವಿತದೆಡೆಗೆ - ದೇವರೊಂದಿಗಿನ ನಿತ್ಯ ಜೀವಿತದೆಡೆಗೆ ನಡೆಸುವುದಾಗಿದೆ (ರೋಮಾಪುರ 2:7). ಇನ್ನೊಂದು ನಾಶನದೆಡೆಗೆ, ದೇವರ ಸನ್ನಿಧಾನದಿಂದ ದೂರದಲ್ಲಿ ನಡೆಸುವುದಾಗಿದೆ (2 ಥೆಸಲೋನಿಕ 1:9). ಸರಳವಾದ ರೀತಿಯಲ್ಲಿ, ಒಂದು ಪರಲೋಕಕ್ಕೆ ಉನ್ನತಮಾರ್ಗ, ಇನ್ನೊಂದು ನರಕಕ್ಕೆ ಕೆಳಸ್ಥರದ ಮಾರ್ಗ.

## ಕೆಟ್ಟಫಲ ಅಥವಾ ಒಳ್ಳೆಯ ಫಲ (ಮತ್ತಾಯ 7:15-20; ಲೂಕ 6:43-45)

ನಾವು ಕ್ರಮಿಸುವ ಮಾರ್ಗವು ಅತಿದೊಡ್ಡ ವ್ಯತ್ಯಾಸವನ್ನು ತರಲು ಸಾಧ್ಯ.[28] ಇಲ್ಲ, ಅದನ್ನು ನಾನು ಈ ರೀತಿ ಬದಲಾಯಿಸುವವನಾಗಿದ್ದೇನೆ: ನಾವು ಪ್ರಯಾಣಿಸುವಂಥದ್ದು ಒಂದು ನಿತ್ಯತ್ವದ ಪರಿಣಾಮವನ್ನು ಮಾಡುವುದಾಗಿದೆ. ಅದನ್ನು ಮನುಕುಲವು ಅರ್ಥೈಸಿಕೊಳ್ಳುವುದನ್ನು ಸೈತಾನನು ಬಯಸುವುದಿಲ್ಲ. ಅವರು ಪ್ರಯಾಣಿಸುವ ಮಾರ್ಗ ಯಾವುದೇ ಆಗಿರಲಿ (ಅವರು ಹೇಗೆ ಜೀವಿಸುತ್ತಾರೋ ಅದೇ) ಅದರಿಂದ ಅವರ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ ಅಥವಾ ಅದಲ್ಲದೇ ವಿಶಾಲವಾದ ಮಾರ್ಗವು ನೈಜವಾಗಿ ಇಕ್ಕಟ್ಟಾದ ಮಾರ್ಗವೇ ಆಗಿದೆ ಎಂದು ಜನರು ಯೋಚಿಸುವತ್ತ ಆತನು ನಡೆಸುವವನಾಗಿದ್ದಾನೆ. ಇದನ್ನು ಸಂಪೂರ್ಣಗೊಳಿಸಲು ಆತನು ಸುಳ್ಳು ಬೋಧ ಕರನ್ನು ಬಳಸುತ್ತಾನೆ. ಪರ್ವತ ಪ್ರಸಂಗದ ಮುಂದಿನ ಭಾಗವು ಸುಳ್ಳು ಬೋಧಕರ ವಿರುದ್ಧದ ಎಚ್ಚರಿಕೆಯೇ ಆಗಿದೆ.

ಒಬ್ಬ ಪ್ರವಾದಿಯು ದೇವರ ಬಗೆಗೆ ಮಾತನಾಡುವವನಾಗಿರುತ್ತಾನೆ; ಒಬ್ಬ ಸುಳ್ಳು ಪ್ರವಾದಿಯು ದೇವರಿಗಾಗಿ ಮಾತನಾಡುವುದನ್ನು ಪ್ರತಿಪಾದಿಸುವವನಾಗಿರು ತ್ತಾನೆ ಆದರೆ ಹಾಗೆ ಮಾಡುವುದಿಲ್ಲ. ಇದಕ್ಕಾಗಿ ಯೇಸುವು ಸುಳ್ಳುಪ್ರವಾದಿಗಳನ್ನು "ಕುರಿವೇಷದಲ್ಲಿರುವ ತೋಳಗಳು" ಎಂದು ಕರೆಯುತ್ತಾನೆ (ನೋಡಿರಿ ಮತ್ತಾಯ 7:15). ಅವರು ಆ ರೀತಿಯಲ್ಲಿರುವಂತೆ ಕಂಡರೂ ಅವರು ಅದಾಗಿರುವುದಿಲ್ಲ. ತಮ್ಮ ದುಷ್ಟತನದ ದೋಷದ ಮೇಲೆ ಸತ್ಯದ ತೆಳುವಾದ ಹೊದಿಕೆಯನ್ನು ಹೊದಿಸಿರುತ್ತಾರೆ, ತನ್ನ ಕೆಟ್ಟತನವನ್ನು ಒಳ್ಳೆಯ ಕಾರ್ಯಗಳೆಂಬ ದೀಪದಲ್ಲಿ ಮುಚ್ಚಿಸುತ್ತಾರೆ (ನೋಡಿರಿ ಮತ್ತಾಯ 7:22, 23).

ಕ್ರಿಸ್ತನು ತನ್ನ ಕೇಳುಗರಿಗೆ ಶಾಸ್ತ್ರಿಗಳ ಮತ್ತು ಫರಿಸಾಯರ ಬೋಧನೆಗೆ ಗಮನಕೊಡುವಂತೆ ವಿಶೇಷವಾಗಿ ಎಚ್ಚರಿಸಿದ್ದನು, ಆದರೆ ಸುಳ್ಳು ಬೋಧಕರು ಅದರ ಆರಂಭದಿಂದ ಇಂದಿವರೆಗೂ ಚರ್ಚನ್ನು ತೊಂದರೆಗೊಳಿಸುತ್ತಾ ಇದ್ದಾರೆ (ಮತ್ತಾಯ 24:11, 24; ಅಪೊಸ್ತಲರ ಕೃತ್ಯಗಳು 20:29, 30; 2 ಪೇತ್ರ 2:1) ನಾವು ಸುಳ್ಳು ಬೋಧಕರನ್ನು ಗುರುತಿಸುವದು ಅದು ಅತ್ಯಗತ್ಯವಾದುದ್ದು. ಅದನ್ನು ನಾವು ಹೇಗೆ ಮಾಡಬಹುದು? ಅವರು ಕೊಡುವ "ಫಲ"ಗಳಿಂದ ಅಂದರೆ ಅವರ ಜೀವಿತದ ಫಲ ಮತ್ತು ಅವರ ಬೋಧನೆಯ ಫಲಗಳಿಂದ ನಾವು ಅವರನ್ನು ತಿಳಿಯಬಹುದು (ಮತ್ತಾಯ 7:16-20; ನೋಡಿರಿ 1 ಯೋಹಾನ 4:1; ಅಪೊಸ್ತಲರ ಕೃತ್ಯಗಳು 17:11).

ಮನುಷ್ಯನ ಬೋಧಿಸುವಂತದ್ದು ಆತನ ಹೃದಯದ ಬಗೆಗೆ ಇರುವುದನ್ನು ತಿಳಿಸುವುದಾಗಿದೆ ಎನ್ನುತ್ತಾ "ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವದು" (ಲೂಕ 6:45) ಎಂದು ಲೂಕನ ವಿವರಣೆಯು ಸೇರಿಸುವುದಾಗಿದೆ.[29] ಯೇಸು ಮೊದಲು ಮಾತನಾಡಿದ ಮಾತುಗಳಾದ "ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ" ಆತನ ಎಚ್ಚರಿಕೆಯು ಇಂದು ಸಕಾಲದಂತಿದೆ (ಮತ್ತಾಯ 7:15ಎ; KJV).

## ಹೇಳುವದು ಅಥವಾ ಮಾಡುವದು (ಮತ್ತಾಯ 7:21-23)

ಎಲ್ಲಾ ಸುಳ್ಳು ಪ್ರವಾದಿಗಳು ತಾವು ಸುಳ್ಳು ಪ್ರವಾದಿಗಳು ಎಂದು ತಿಳಿದಿರುವರೇ? ಅಗಲ

ವಾದ ಮಾರ್ಗದಲ್ಲಿರುವ ಪ್ರತಿಯೊಬ್ಬನು ತಾನು ನಾಶನದ ಮಾರ್ಗದಲ್ಲಿ ಇರುವೆನು ಎಂದು ಬಲ್ಲವನಾಗಿದ್ದಾನೆಯೇ? ಸ್ಪಷ್ಟವಾಗಿ ಇಲ್ಲ. ಸ್ವ-ವಂಚಿಸುವಿಕೆಯು ಸಾಧ್ಯ ಎಂದು ಮತ್ತಾಯ 7:21-23ರಲ್ಲಿನ ಯೇಸುವಿನ ಮಾತುಗಳು ಸೂಚಿಸುವವುಗಳು ಆಗಿವೆ:

> ನನ್ನನ್ನು "ಸ್ವಾಮೀ ಸ್ವಾಮೀ" ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕ ರಾಜ್ಯದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯವನ್ನು ಸೇರುವನು. "ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ?" ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ ನನ್ನಿಂದ ತೊಲಗಿ ಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು.

ಈ ವಾಕ್ಯಗಳನ್ನು ನಾನು ಓದಿದಾಗಲೆಲ್ಲ, ನಾನು ದುಃಖದಿಂದ ತುಂಬಿಹೋಗುವೆನು.

"ಆ ದಿನ" ಎಂಬುದು ನ್ಯಾಯತೀರ್ಪಿನ ದಿನವನ್ನು ಸೂಚಿಸುವುದಾಗಿದೆ (ಅಪೊಸ್ತಲರ ಕೃತ್ಯಗಳು 17:31). ಈ ದೃಷ್ಟಾಂತದಲ್ಲಿ ನ್ಯಾಯತೀರ್ಪಿನ ದಿನದಂದು ಪ್ರತಿಭಟನಾಕಾರರು ನಿಜವಾಗಿ ತಾವು ಪ್ರತಿಪಾದಿಸಬೇಕೆಂದಿರುವ ಪ್ರತಿಯೊಂದನ್ನೂ ಮಾಡುತ್ತಾರೆಯೇ? ಯೇಸು ಅವರ ಪ್ರತಿಪಾದನೆಯನ್ನು ನಿರಾಕರಿಸುವುದಿಲ್ಲ - ಆದರೆ ಒಂದು ವೇಳೆ ಅವರು ಒಳ್ಳೆಯ ಕಾರ್ಯಗಳನ್ನು ಮಾಡಿದ್ದಾದರೂ ಕೂಡಾ, ಅವರು ಕೆಟ್ಟತನದ ಕೆಲಸಗಾರರೂ ಸಹ ಆಗಿದ್ದಲ್ಲಿ ಅವರು ಸ್ವೇಚ್ಛಾಚಾರವನ್ನು ನಡೆಸುವವರಾಗಿದ್ದಾರೆ ಎಂದು ಯೇಸು ಗದರಿಸುವವನಾಗಿದ್ದಾನೆ. ಅವರ ನಿಖರವಾದ ಕಾರ್ಯಗಳು ಮುಖ್ಯವಲ್ಲದ್ದಕ್ಕಾಗಿ ಸಂಬಂಧಿತವಾದವುಗಳು ಆಗಿವೆ. ವಚನ 23ರ ಬಲು ಮುಖ್ಯವಾದ (ಮತ್ತು ದುಃಖಕರವಾದ) ಪದ ಎಂದರೆ "ನಾನೆಂದೂ ನಿಮ್ಮ ಗುರುತು ಕಾಣೆನು" ಎಂಬುದೇ.

ಬೈಬಲಿನಲ್ಲಿ, "ತಿಳಿ" ಎಂಬ ಪದವು ದೇವರ ಮತ್ತು ಮಾನವನ ಮಧ್ಯದ ಸಂಬಂಧವನ್ನು ಒಳಗೊಂಡ "ಬಾಂಧವ್ಯವನ್ನು ಹೊಂದಿರುವದು"[30] ಎಂಬ ಅರ್ಥವನ್ನು ಹೊಂದಿದೆ (1 ಕೊರಿಂಥ 1:21; ಗಲಾತ್ಯ 4:9; ಫಿಲಿಪ್ಪಿ 3:10). "ತನ್ನವರು ಯಾರೆಂದು ಕರ್ತನು ತಿಳಿದಿದ್ದಾನೆ" ಎಂದು ಪೌಲನು ಬರೆಯುತ್ತಾನೆ (2 ತಿಮೋಥೆ 2:19). "ನಾನೆಂದೂ ನಿಮ್ಮ ಗುರುತು ಕಾಣೆನು" ಎಂದು ಯೇಸು ಹೇಳುವಾಗ ಆ ಆರೋಪವು ಆತನೊಂದಿಗಿನ ಬಾಂದತ್ವವನ್ನು ಎಂದಿಗೂ ರಕ್ಷಿಸದು ಎಂದು ಖಂಡಿತವಾಗಿ ಹೇಳು ವುದಾಗಿದೆ. ಅವರು ಆತನನ್ನು ಮತ್ತು ಆತನ ಬೋಧನೆಗಳನ್ನು ಅನುಸರಿಸುವುದಿಲ್ಲ, ಆದರೆ ಒಡೆಯನು ಮತ್ತು ಕರ್ತನು ಆದಂತ ಆತನಿಗೆ ತಮ್ಮ ಜೀವಿತವನ್ನು ಒಪ್ಪಿಸಲು ನಿರಾಕರಿಸಿದರು. ಅವರ ಒಳ್ಳೆಯ ಕಾರ್ಯಗಳು ಏನೇ ಆಗಿರಲಿ ಅವುಗಳು "ಕ್ರಿಸ್ತನಲ್ಲಿ" ಮಾಡಲ್ಪಡಲಿಲ್ಲ (2 ಕೊರಿಂಥ 5:17; ಎಫೆಸ 2:13; 3:21; ರೋಮಾಪುರ 16:3, 9), ಆದರೆ ಅವುಗಳು ಕ್ರಿಸ್ತನನ್ನು ಬಿಟ್ಟು ಮಾಡಲ್ಪಟ್ಟವುಗಳು ಆಗಿವೆ.[31]

ಯೇಸು ನಮ್ಮನ್ನು ಬಲ್ಲವನಾಗಿದ್ದಾನೆ ಎಂದು ನಾವು ಹೇಗೆ ಖಚಿತಪಡಿಸಿಕೊ ಳ್ಳಬೇಕು? ನಮ್ಮ ಮಾತಿನ ಸೇವೆಯನ್ನು ಮಾತ್ರ ಆತನಿಗೆ ಕೊಟ್ಟರೆ ಸಾಲದೇ? "ಕರ್ತನು, ಕರ್ತನು" ಎಂದು ಹೇಳುವುದು ಸಾಕಾಗದೇ? ಇಲ್ಲ, ನಾವು ದೇವರ ಚಿತ್ತವನ್ನು ಮಾಡಲೇಬೇಕು ಎಂದು ಕ್ರಿಸ್ತನು ಹೇಳುತ್ತಾನೆ. ಪರಿಪೂರ್ಣವಾದ ವಿಧೇಯತೆಯು ಅವಶ್ಯವಿದೆಯೇ? ಇಲ್ಲ, ಅಂಥವುಗಳು ಅಸಾಧ್ಯವಾದವುಗಳು ಆಗಿವೆ (ರೋಮಾಪುರ 3:23).[32] ಹೋಗೋ, ಯೇಸು ನಮ್ಮನ್ನು ಬಲ್ಲವನಾಗಿದ್ದಾನೆ ಎಂದು ನಮಗೆ ಖಚಿತವಾಗಿಸಿಕೊಳ್ಳಬೇಕಾದರೆ, ನಾವು ಕ್ರೈಸ್ತರಾಗಿರಲು ಕರ್ತನು ಹೇಳಿದಂತೆ ನಾವು ಮಾಡುವವರಾಗಿರಬೇಕು (ರೋಮಾಪುರ 6:3-7, 11, 17, 18,

23; ಗಲಾತ್ಯ 3:26, 27), ಮತ್ತು ನಂತರ ನಾವು ನಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ಆತನಿಗೆ ವಿಧೇಯರಾಗಿರೋಣ. J. W. McGarveyರವರು, ಈ ರೀತಿಯಲ್ಲಿ ಇದನ್ನು ಇಡುತ್ತಾರೆ. "... ವಿಧೇಯತೆಯ ದೈಹೀಕ ಬಲಹೀನತೆಯ ಸಾಧ್ಯತೆಯವರೆಗೆ, ನಮ್ಮ ದೈನಂದಿನ ಪಾಪಗಳ ಕ್ಷಮಾಪಣೆಗೋಸ್ಕರ ದೈಹೀಕ ಒಪ್ಪಿಕೊಳ್ಳುವಿಕೆಯ ಸಾಂಗತ್ಯದಿಂದ, ಎಂದಿಗೂ ದೇವರ ಕಟಾಕ್ಷವು ಒದಗದು."[33]

## ಕೇಳುವದು ಮತ್ತು ಮಾಡುವದು (ಮತ್ತಾಯ 7:24-27ಣಿ ಲೂಕ 6:46-49)

ಕ್ರಿಸ್ತನಿಗೆ ವಿಧೇಯರಾಗುವ ಅವಶ್ಯಕತೆಯನ್ನು ಒತ್ತಿ ಹೇಳುವದನ್ನು ಪರ್ವತ ಪ್ರಸಂಗದ ಅಂತಿಮ ಮಾತುಗಳು ಹೇಳುವುದನ್ನು ನಾವು ನೋಡಿದ್ದೇವೆ. ಯೇಸು ಈಗ ಇಬ್ಬರು ಮನೆಕಟ್ಟುವವರ ಅಂದರೆ ಬಂಡೆಗಲ್ಲಿನ ಮೇಲೆ ಮನೆಕಟ್ಟಿದ ಜಾಣ ಹಾಗೂ ಉಸುಬಿನ ಮೇಲೆ ಮನೆಕಟ್ಟಿದ ಮೂಢನ ಜನಪ್ರಿಯದೃಷ್ಟಾಂತದ ಮೂಲಕ ಇದನ್ನು ಮುಗಿಸಿದನು. ಮೊದಲು, ಯೇಸು ತನ್ನ ಮಾತುಗಳನ್ನು ಕೇಳಿ ಮತ್ತು ಅದರಂತೆ ನಡೆಯುವವರಿಗೆ ಇದನ್ನು ಹೋಲಿಸಿದನು, ಎರಡನೆಯದನ್ನು ಆತನ ಮಾತನ್ನು ಕೇಳಿ ಏನನ್ನು ಮಾಡದವನಿಗೆ ಹೋಲಿಸಿದನು.

ಲೂಕನ ವಿವರಣೆಯಲ್ಲಿ ಮೊದಲನೆಯ ವ್ಯಕ್ತಿಯು "ಆಳವಾಗಿ ಅಗಿದು ಬಂಡೆಯ ಮೇಲೆ ಅಸ್ತಿವಾರವನ್ನು ಹಾಕಿದನು" (ಲೂಕ 6:48), ಮತ್ತು ಎರಡನೆಯವನು "ಅಸ್ತಿವಾರವಿಲ್ಲದೆ ನೆಲದ ಮೇಲೆ ಮನೆ ಕಟ್ಟಿದನು" (ಲೂಕ 6:49) ಎಂದಿದೆ. ಬಡಗಿಯಾದಂತ (ನೋಡಿರಿ ಮಾರ್ಕ 6:3), ಕ್ರಿಸ್ತನು ಭದ್ರವಾದ ಅಸ್ತಿವಾರದ ಅವಶ್ಯಕತೆಯನ್ನು ಅರಿತುಕೊಂಡಿದ್ದನು, ಆದರೆ ಇಂಥ ಅಲ್ಪವಾದ ಅಥವಾ ಕಟ್ಟುವಿಕೆಯ ಯಾವುದೇ ಅನುಭವವಿಲ್ಲದಿರುವಿಕೆಯೂ ಕೂಡಾ ಮನೆಗೆ ಅಸ್ತಿವಾರದ ಅವಶ್ಯಕತೆಯಿರುವುದನ್ನು ತಿಳಿಸುವುದಾಗಿದೆ ಪ್ರತಿಯೊಂದು ಜೀವಿಗೂ ಅಸ್ತಿವಾರದ ಅವಶ್ಯಕತೆಯು ಇದೆ.

ನಮ್ಮ ಕಾಲದ ಒಂದು ದುರಂತವೆಂದರೆ ಅನೇಕ ಜೀವಿತಗಳು ಲೌಕಿಕ ಅಭಿಪ್ರಾಯದ ಉಸುಬಿನ ಮೇಲೆ ಕಟ್ಟುವಿಕೆಯ ಮೇಲೆ ಸ್ಥಳಾಂತರವಾಗುವುದೇ ಆಗಿದೆ. ನಮ್ಮ ಜೀವಿತಕ್ಕೆ ಯೇಸುವಿನ ಮತ್ತು ಮಾತುಗಳ ಭದ್ರವಾದ ಅಸ್ತಿವಾರದ ಅವಶ್ಯಕತೆಯು ಇದೆ (ನೋಡಿರಿ 1 ಕೊರಿಂಥ 3:11; ಎಫೆಸ 2:20). ನಾವು ಕ್ರಿಸ್ತನ ಚಿತ್ತವನ್ನು ಮಾಡುವವರಾದರೆ (ಅದನ್ನೇ ಮಾತ್ರವೇ) ಅದರ ಸ್ಥಿರತೆಯನ್ನು ನಾವು ಹೊಂದುವೆವು. ಈ ಪರಿಚ್ಛೇದದಲ್ಲಿ ಮಾಡುವ ಮತ್ತು ಮಾಡಲಾರದ ವಚನಗಳ ವ್ಯತ್ಯಾಸವಿದೆ. ಜಗತ್ತಿನುದ್ದದ ಮಕ್ಕಳು ಬಂಡೆಯ ಮೇಲೆ ಮನೆಕಟ್ಟಿದ ಜಾಣನ ಮತ್ತು ಉಸುಬಿನ ಮೇಲೆ ಮನೆಕಟ್ಟಿದ ಮೂಢನ ಬಗೆಗಿನ ಹಾಡನ್ನು ಹಾಡುತ್ತಾರೆ. ನಾನು ಆ ಹಾಡನ್ನು ಕಲಿಸುವಾಗ, ಅದರ ಮೂಲವಾ ದಂತಹ ಅಂತಿಮ ವಚನವನ್ನು ದೃಢೀಕರಿಸುವುದರ ಮೇಲೆ ಇಡುವ ವಚನಕ್ಕೆ ನಾನು ಬದಲಾಯಿಸುವವನಾಗಿದ್ದೇನೆ:

> ಹೀಗೆ ನಿಮ್ಮ ಜೀವಿತವನ್ನು *ಕರ್ತನ ಮಾತುಗಳ* ಮೇಲೆ ಕಟ್ಟಿರಿ;[35]
> ನಿಮ್ಮ ಜೀವಿತವನ್ನು ಕರ್ತನ ಮಾತುಗಳ ಮೇಲೆ ಕಟ್ಟಿರಿ;
> ನಿಮ್ಮ ಜೀವಿತವನ್ನು ಕರ್ತನ ಮಾತುಗಳ ಮೇಲೆ ಕಟ್ಟಿರಿ;
> ಹಾಗೂ ಆಶೀರ್ವಾದ ನಿಮ್ಮ ಬಳಿಗೆ ಬರುವದು.
>
> ಕರ್ತನ ಚಿತ್ತವನ್ನು *ನಾವು ಮಾಡಿದಾಗ* ಆಶೀರ್ವಾದ ನಿಮ್ಮ ಬಳಿಗೆ ಬರುವದು;
> ಕರ್ತನ ಚಿತ್ತವನ್ನು ನಾವು ಮಾಡಿದಾಗ ಆಶೀರ್ವಾದ ನಿಮ್ಮ ಬಳಿಗೆ ಬರುವದು;
> ಕರ್ತನ ಚಿತ್ತವನ್ನು ನಾವು ಮಾಡಿದಾಗ ಆಶೀರ್ವಾದ ನಿಮ್ಮ ಬಳಿಗೆ ಬರುವದು;
> ಹೀಗೆ ನಿಮ್ಮ ಜೀವಿತವನ್ನು ಕರ್ತನ ಮಾತುಗಳ ಮೇಲೆ ಕಟ್ಟಿರಿ.

"ನೀವು ನನ್ನನ್ನು ಸ್ವಾಮೀ, ಸ್ವಾಮೀ ಅಂತ ಕರೆದು ನಾನು ಹೇಳುವುದನ್ನು ನಡಿಸದೆ ಇರುವುದೇಕೇ?" (ಲೂಕ 6:46) ಎಂಬ ಲೂಕನ ವಿವರಣೆಯಲ್ಲಿನ ಯೇಸುವಿನ ಮಾತುಗಳು ಶಿಷ್ಯರಲ್ಲಿ ಇನ್ನೂ ಸವಾಲೆಸುವವುಗಳು ಆಗಿವೆ.

## ಮುಕ್ತಾಯ (ಮತ್ತಾಯ 7:28-29)

"ಯೇಸು ಈ ಮಾತುಗಳನ್ನು ಹೇಳಿ ಮುಗಿಸಿದ ಮೇಲೆ ಆ ಜನರ ಗುಂಪು ಗಳು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟವು, ಯಾಕೆಂದರೆ ಆತನು ಶಾಸ್ತ್ರಿಗಳಂತೆ ಫಲಿಸಾಯರಂತೆ ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶ ಮಾಡುತ್ತಿದ್ದನು"[36] (ಮತ್ತಾಯ 7:28, 29). ಹೆಚ್ಚು ಕಡಿಮೆ ಸಾವಿರ ವರ್ಷಗಳ ನಂತರವೂ ಕೂಡಾ ಪರ್ವತ ಪ್ರಸಂಗವು ಇನ್ನೂ ಆಶ್ಚರ್ಯಕರವಾಗಿ ಇದೆ. ಇದನ್ನು ಓದಿರಿ, ಅಧ್ಯಯನ ಮಾಡಿರಿ, ಅದಕ್ಕಿಂತ ಹೆಚ್ಚಾಗಿ ಅದನ್ನು ಅಭ್ಯಾಸದಲ್ಲಿ ತರಲು ಎಲ್ಲಾ ಶ್ರಮವನ್ನು ಮಾಡಿರಿ.

ಕ್ರಿಸ್ತನ ಪ್ರಸಂಗವು ಸೂಚಿಸುವಂತಹ ನಾವು ಪ್ರಯಾಣಿಸಬಹುದಾದ ಎರಡು ಮಾರ್ಗಗಳನ್ನು ಸೂಚಿಸುವುದರಿಂದ ನಾನು ಈ ಪಾಠವನ್ನು ಆರಂಭಿಸಿದೆನು (ಮತ್ತಾಯ 7:13, 14). ಜಗತ್ತು ವ್ಯಕ್ತಿಗಳಲ್ಲಿ ಬಡವ ಮತ್ತು ಶ್ರೀಮಂತ, ಸುಂದರನು ಮತ್ತು ಸಾಧಾರಣನು, ಕೌಶಲ್ಯವುಳ್ಳವನು ಕೌಶಲ್ಯವಿಲ್ಲದವನು, ಯಶಸ್ವಿಯುತನು ಮತ್ತು ವಿಫಲನಾದನು ಎಂದು ಭಿನ್ನತೆಯನ್ನು ಮಾಡುವುದಾಗಿರುತ್ತದೆ. ಕೊನೆಯಲ್ಲಿ ಕೇವಲ ಒಂದು ಮಾರ್ಗವು ಉಳಿಯುವುದಗಾದೆ ಇಕ್ಕಟ್ಟಾದ ಮಾರ್ಗ ಅದು ನಮ್ಮನ್ನು ನಿತ್ಯ ಜೀವಿತದೆಡೆಗೆ ನಡೆಸುವುದಾಗಿದೆ ಅಥವಾ ಅಗಲವಾದ ಮಾರ್ಗವು ನಿತ್ಯನಾಶದೆಡೆದೆ ನಡೆಸುವುದಾಗಿದೆ (ಮತ್ತಾಯ 25:46; ಯೋಹಾನ 3:16; ರೋಮಾಪುರ 2:7, 8; 6:23) ನಮ್ಮಲ್ಲಿ ಪ್ರತಿಯೊಬ್ಬರನ್ನು ಪದೇ ಪದೇ ಕೇಳುತ್ತಿರುವ ಒಂದು ಪ್ರಶ್ನೆಯೆಂದರೆ "ನಾನು ಪ್ರಯಾಣಿಸುತ್ತಿರುವದು ಎಂಥ ಮಾರ್ಗ?" ಎಂಬುದೇ. ನೀವು ಪ್ರಯಾಣಿಸುತ್ತಿರುವದು ಯಾವ ಮಾರ್ಗ? ಜೀವದೆಡೆಗೆ ಅಥವಾ ನಾಶನದೆಡೆಗೆ ನಾವು ಮಾಡುವ ಆಯ್ಕೆಗಳೊಡನೆ ಜಗತ್ತು ನಮ್ಮನ್ನು ಎದುರಿಸುವುದಾಗಿದೆ. ಯೋಗ್ಯವಾದ ಆಯ್ಕೆಯನ್ನು ಮಾಡಲು ನಮ್ಮಲ್ಲಿ ಪ್ರತಿಯೊಬ್ಬರಿಗೂ ದೇವರು ಸಹಾಯ ಮಾಡಲಿ.

---

ಟಿಪ್ಪಣಿಗಳು

[1]John R. W. Stott, *The Message of the Sermon on the Mount* (Downers Grove, Ill.: Inter-Varsity Press, 1978), 15. [2]E. Stanley Jones, *The Christ of the Mount* (Nashville: Abingdon Press, 1931), 14. [3]Harvey Scott, *The Sermon on the Mount* (Texarkana, Tex.: The Christian Helper, 1947), 3. [4]KJVಯ ಮತ್ತಾಯ 7:13, 14ರಲ್ಲಿ "ನೇರ" ಎಂದು ಸಾಲಿ ಇದೆ. "ನೇರ" ಇದರ ಅರ್ಥ "ಇಕ್ಕಟ್ಟು" ಎಂದಿದೆ, ಆದರೆ ಅನೇಕರು ಅವರು ಕೇಳಿದಾಗ ಅವರು "ನೇರ" (ಎರಡು ತುದಿಗಳ ಮಧ್ಯದ ದೂರ) ಎಂಬ ಪದದ ಬಗೆಗೆ ಯೋಚಿಸುತ್ತಾರೆ. [5]ನೋಡಲಿ ಲೂಕ 12:33, 34. [6]ಉದಾಹರಣೆಗೆ ಪರಲೋಕದಲ್ಲಿ ಹೇಗೆ ಸಂಪತ್ತನ್ನು ಹೊಂದಬಹುದು ಎಂಬುದಕ್ಕೆ 1 ತಿಮೊಥೆ 6:18, 19 ನೋಡಿರಿ. [7]ನಾವು ತಿಳಿದಂತೆ ಬ್ಯಾಂಕುಗಳು ಆ ದಿನಗಳಲ್ಲಿ ಅಸ್ತಿತ್ವದಲ್ಲಿ ಇರಲಿಲ್ಲ, ಆದ್ದರಿಂದ ಜನರು ಸಂಪತ್ತನ್ನು ನಿಸರ್ಗದಿಂದ ಹಾಳಾಗದಂತೆ (ಯಾಕೋಬ 5:2, 3) ಅಥವಾ ಕಳ್ಳರಿಂದ ಕಳುವಾಗದಂತೆ ತಮ್ಮ ಮನೆಯಲ್ಲಿಡುತ್ತಿದ್ದರು ಅಥವಾ ನೆಲದಲ್ಲಿ ಹೂಣಿಡುತ್ತಿದ್ದರು. [8]ನೋಡಿರಿ ಲೂಕ 11:34-36. [9]ಈ ಮಾಹಿತಿಯು ನನ್ನ NASBಯ ಪ್ರತಿಯ ಅಂಚಿನಲ್ಲಿ ಕೊಡಲ್ಪಟ್ಟ ಟಿಪ್ಪಣೆಯಾಗಿದೆ. KJVಯು ಉದಾರದೃಷ್ಟಿ ಎಂದಿದೆ. [10]ಹೃದಯದ ಮನೋಧರ್ಮಕ್ಕಾಗಿ ಕಣ್ಣು ನಿಂತುಕೊಳ್ಳುವ ಇತರ ಉದಾಹರಣೆಗಾಗಿ ನೋಡಿರಿ ಧರ್ಮೋಪದೇಶಕಾಂಡ 15:9; 28:56; ಜ್ಞಾನೋಕಿತ 23:6; ಮತ್ತಾಯ 20:15. (ಇದರಲ್ಲಿ ಪ್ರತಿಯೊಂದು ವಚನದಲ್ಲಿನ "ಕಣ್ಣು" ಎಂಬ ಪದವು ಮೂಲ ಭಾಗದಲ್ಲಿದ್ದಗ್ಯೂ ಯಾವಾಗಲೂ ಆಂಗ್ಲಭಾಷಾಂತರದಲ್ಲಿ ಉಪಸ್ಥಿತವಿರುವುದಿಲ್ಲ.)

[11]Adapted from J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 256. ಲಿಂದ ಎರವಲು ಪಡೆಯಲಾಗಿದೆ. [12]ನೋಡಿರಿ ಲೂಕ 16:13. [13]ಪಾಪದ ಅಥವಾ ದೇವರ ದಾಸರಾಗಿರುವವರಿಗೆ ಸಾಮಾನ್ಯ ಬೋಧನೆಗಾಗಿ ನೋಡಿರಿ ರೋಮಾಪುರ 6:16-18. [14]John Franklin Carter, *A Layman's Harmony of the Gospels* (Nashville: Broadman Press, 1961), 110. [15]"ಮೊದಲು ಆತನ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ" ಎಂಬುದು ದೇವರ ರಾಜ್ಯಾವನ್ನು ಅರಿತುಕೊಳ್ಳಲು ಮತ್ತು ಆತನ ರಾಜಾಜ್ಞೆಗಳಿಗೆ ವಿಧೇಯರಾಗಲು ಪ್ರಯತ್ನಿಸುವುದು ಆಗಿದೆ. ಯೇಸು "ರಾಜ್ಯ" ಮತ್ತು "ಸಭೆ" ಎಂಬ ಪದಗಳನ್ನು ಮತ್ತಾಯ 16:18, 19ರಲ್ಲಿ ಅದಲು ಬದಲಾಗಿ ಬಳಸಿರುವುದರಿಂದ, ಕರ್ತನ ಸಭೆಯ ಸಂಗತಿಗಳು ನಮ್ಮ ಸ್ವಂತವುಗಳಿಗಿಂತ ಮೇಲಿನು ಆಗಿದೆ ಎಂದು ನಾವೂ ಸಹ ಅನ್ವಯವನ್ನು ಮಾಡಿಕೊಳ್ಳಬೇಕು. [16]Adapted from McGarvey and Pendleton, 259. [17]ಈ ಪದಗಳನ್ನು ಮಾತನಾಡುವಾಗ ಯೇಸು ಮುಂದಿನದನ್ನೂ ಕೂಡಾ ಸಿದ್ಧಮಾಡುತ್ತಿದ್ದನು: ತಾನು ಈ ಲೋಕವನ್ನು ಬಿಟ್ಟು ಹೋಗುವುದಕ್ಕಾಗಿರುವುದರಿಂದ ತನ್ನ ಅಪೋಸ್ತಲರನ್ನು ಸಿದ್ಧಮಾಡುತ್ತಿದ್ದನು. ಹಳೆಯ ಒಡಂಬಡಿಕೆಯಲ್ಲಿರುವಂತೆ, ಇರುವೆಗಳು ಭವಿಷ್ಯದ ಯೋಜನೆಯನ್ನು ಮಾಡಿಕೊಳ್ಳುವಲ್ಲಿ ಮೊದಲಿಗ ಎನಿಸಿವೆ (ಜ್ಞಾನೋಕ್ತಿ 30:25), ಇತರ ಪರಿಚ್ಛೇದಗಳು ಮೇಲಿನವುಗಳ ಬಗೆಗೆ ಯೋಚಿಸುವವುಗಳು (ಚಿಕ್ಕ ಅಥವಾ ವಿಚಾರವಿಲ್ಲದವುಗಳ ಜೊತೆ ಕಾರ್ಯಮಾಡುವುದಕ್ಕೆ ವಿರೋಧಿಸುವವುಗಳು) ಆಗಿವೆ. ನೋಡಿ ಜ್ಞಾನೋಕ್ತಿ 21:5; 25:8; ಮತ್ತು 2 ಕೊರಿಂಥ 8:20, 21. [18]ನನ್ನ ಆಸ್ತಿ ನಮ್ಮ ಸಮಯ ಒಳಗೊಂಡು ಮನೆಮಾರ್ತೆಯ ಪ್ರತಿಯೊಂದನ್ನು ದೇವರು ನಮ್ಮ ಕೈಯಲ್ಲಿ ಇಟ್ಟಿದ್ದೇನೆ. ನಮ್ಮ ಮನೆವಾರ್ತೆಯಲ್ಲಿ ನಾವು ವಿಧೇಯರಾಗಿರಲೇಬೇಕು (ನೋಡಿ 1 ಕೊರಿಂಥ 4:2). [19]ನಂತರದಲ್ಲಿ ಈ ಪುಸ್ತಕದಲ್ಲಿ ಸಿಕ್ಕುವ "ತೀರ್ಪುಮಾಡಬೇಡಿರಿ" "ಇತರರೊಡನೆ ಪಡೆಯುವುದು ಹೇಗೆ" ಎಂಬವುಗಳ ಹೆಚ್ಚಿನ ಚರ್ಚೆಗಾಗಿ ಮತ್ತಾಯ 7:1-6ನ್ನು ನೋಡಿರಿ. [20]"ಯೇಸು ಸಾಮ್ಯಗಳ ಮೂಲಕ ಮಾತನಾಡಿದನು" ಎಂದು ಲೂಕ 6:39 ಹೇಳುತ್ತದೆ.

[21]ಮತ್ತಾಯ 7:7-11 ಹೆಚ್ಚಿನ ಸಂಬಂಧದ ಮುಂದಾಗಲಿ ಮತ್ತು ನಂತರವಾಗಲಿ ಇದ್ದು ನಂತರದ ಎರಡು ಪ್ರಸಂಗಗಳಲ್ಲಿ ಈ ಸರಣಿಯನ್ನು ನೋಡಿರಿ. [22]ನೋಡಿರಿ ಲೂಕ 18:1. [23]ಯಾಕೋಬ 5:16ಬಿ-18 ನೋಡಿರಿ. [24]ಪರಲೋಕದಲ್ಲಿನ ನಮ್ಮ ತಂದೆಯು ನಮ್ಮ ಇಹಲೋಕದ ನಮ್ಮ ತಂದೆಯು ನಮ್ಮನ್ನು ನೋಡಿಕೊಳ್ಳುವ ಹಾಗೆಯೇ ನೋಡಿಕೊಳ್ಳುತ್ತಾನೆ ಎಂದು ಈ ವೇದಭಾಗದಲಿಲ ಇತರ ಹೋಲಿಕೆಗಳು ಮಾಡುವವುಗಳು ಆಗಿವೆ (ಉದಾಹರಣೆಗಾಗಿ ನೋಡಿರಿ ಇಬ್ರಿಯ 12:4-13) ಹೇಗೋ ನಮ್ಮ ಪರಲೋಕದ ತಂದೆಗೆ ಕೊಡುವ ಪ್ರತಿಯೊಂದು ಗೌರವದಂತೆಯೇ ನಮ್ಮ ಇಹಲೋಕದ ತಂದೆಗೂ ಸಲ್ಲಬೇಕು ಎಂದು ಪರಿಗಣಿಸುವಲ್ಲಿ ಇರುವಲ್ಲಿ ನಾವು ಜಾಗರೂಕರಾಗಿರಬೇಕು. ಪ್ರತಿಯೊಬ್ಬ ಇಹಲೋಕದ ತಂದೆಯು ತನ್ನ ಮಕ್ಕಳೊಡನೆ ವ್ಯವಹರಿಸುವಾಗ ತಪ್ಪು ಮಾಡಬಹುದು, ಆದರೆ ದೇವರು ತಪ್ಪನ್ನು ಮಾಡನು. ದೇವರು ಯಾರೋಬ್ಬರನ್ನೂ ನರಕಕ್ಕೆ ಹಾಕನು ಎಂದು ಬೋಧಿಸುವ ಮತ್ತಾಯ 7:7-11 ಪರಿಚ್ಛೇದಗಳು ಇರಬೇಕೆಂದು ಕೆಲವರು ಪ್ರಯತ್ನಿಸುವವರಾಗಿದ್ದಾರೆ, ಯಾಕೆಂದರೆ (ಅವರು ಹೇಳುವಂತೆ) ಇಹಲೋಕದ ತಂದೆಯು ತನ್ನ ಮಕ್ಕಳಿಗೆ ಹಾಗೆ ಮಾಡನು. ಈ ರೀತಿಯಲ್ಲಿ ಈ ಪರಿಚ್ಛೇದವನ್ನು ನ್ಯಾಯತೀರ್ಪಿಗಾಗಿ ಈ ಪರಿಚ್ಛೇದಗಳನ್ನು ಹೀಗೆ ವ್ಯಾಖ್ಯಾನಿಸಬಹುದು (ಇಂಥವುಗಳು ಮತ್ತಾಯ 25:31-46). [25]ಬಂಗಾರದ ನಿಯಮದ ಚರ್ಚೆಗಾಗಿ ನೋಡಿರಿ ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ಎಲ್ಲರೊಡನೆ ಹೇಗೆ ಜೊತೆಯಾಗಿರಬೇಕು" ಎಂಬ ಪ್ರಸಂಗವನ್ನು ನೋಡಿರಿ. [26]ಅದರಲ್ಲೂ ವಿಶೇಷವಾಗಿ ಸಂಬಂಧಿತವಾಗಿದ್ದು ಎಲ್ಲರೊಡನೆ ಹೇಗೆ ಜೊತೆಯಾಗಿರ ಬೇಕು ಎಂಬ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ಬೋಧನೆಯ ಕುರಿತಾಗಿದೆ. [27]ಲೂಕ 13:23, 24 ನೋಡಿರಿ. [28]"ಲೋಕ ರೂಪ" ಎಂಬ ಪದವು ಸಾಮಾನ್ಯವಾದ ವಿಶೇಷವಾಗಿದೆ. ಇದು ಮಹತ್ತರವಾದ ಅಂಕಿಯನ್ನು ಸೂಚಿಸುವುದಾಗಿದೆ. ಈ ವಿಶೇಷವು ಅನೇಕ ಸಾರಿ ಉಪಯೋಗಿಸಲ್ಪಟ್ಟದ್ದಾಗಿದೆ (ನೋಡಿರಿ ಯಾಕೋಬ 3:6). [29]ಲೂಕ 6:45 ನಮ್ಮ ಮಾತುಗಳಿಗೆ ಸಂಬಂಧಿಸಿದಂತ ಸಾಮಾನ್ಯ ಅನ್ವಯವಾಗಿದೆ. ನಾವೇನನ್ನು ಮಾತನಾಡುತ್ತೇವೆಯೋ ಅದು ನಮ್ಮ ಹೃದಯವನ್ನು ಪ್ರಕಟಿಸುವುದಾಗಿದೆ. ಕೆಲ ಸಂದರ್ಭಗಳಲ್ಲಿ, ಹೇಗೋ, ಪದಗಳು ವಿಶೇಷವಾಗಿ ದೇವರೊಡನೆ ಮಾತನಾಡುವದನ್ನ ಪ್ರತಿಪಾದಿಸುವದನ್ನು ಅನ್ವಯಿಸುವವುಗಳಾಗಿವೆ. ಇಲ್ಲಿ ಒಂದು ಎಚ್ಚರಿಕೆಯ ಪದವನ್ನು ನಾನು ಸೇರಿಸುವವನಾಗಿದ್ದೇನೆ: ಯೇಸುವಿನ ಬೋಧನೆಗಳನ್ನು ಮತ್ತಾಯ 7:1ರಲ್ಲಿರುವಂತೆ ತೀರ್ಪು ಮಾಡುವುದನ್ನು ನಿರಾಕರಿಸುವದಕ್ಕೆ ವಿರುದ್ಧವಾಗಿ ಲೂಕ 6:45ನ್ನುಬಳಸಬಾರದು. ನೀವು ಮತ್ತೊಬ್ಬರೊಡನೆ ಮಾತನಾಡುವುದಕ್ಕೆ ಉತ್ತಮವಾದ ಸಂಯೋಜನೆಗಳನ್ನು ಇಡಿರಿ. [30]ಇದು ವಸ್ತುಗಳ

ಸಂಬಂಧವನ್ನು ಒಳಗೊಂಡಿದೆ. ಅದಾಮನು ತನ್ನ ಹೆಂಡತಿಯನ್ನು "ತಿಳಿದ್ದಿದನು" (ಆದಿಕಾಂಡ 4:1; ನೋಡಿರಿ KJV) ಎಂದು ಬೈಬಲ್ ಹೇಳುತ್ತದೆ. NASBಯಲ್ಲಿ "ಜೊತೆಗೆ ಸಂಬಂಧಿಸಿದ" ಎಂದಿದೆ. NASBಯ ನನ್ನ ಪ್ರತಿಯ ಟಿಪ್ಪಣಿಯಲ್ಲಿ "ಅಕ್ಷರ ಸಹ ತಿಳಿದಿರುವದು" ಎಂದಿದೆ. ಈ ಸೌಮ್ಯೋಕ್ತಿಯು ಬೈಬಲ್ಲಿನುದ್ದಕ್ಕೂ, ಹೊಸ ಒಡಂಬಡಿಕೆಯಲ್ಲೂ ಕೂಡಾ ಬಳಸಲ್ಪಟ್ಟಿದೆ (ನೋಡಿರಿ ಮತ್ತಾಯ 1:25; ಲೂಕ 1:34 [ನೋಡಿರಿ KJV]).

[31]ನೀವು ಬಯಸಿದ್ದಾದರೆ, ಮುಂದೆ ಎಲ್ಲಿ ಶ್ರಮವನ್ನು ಹಾಕಬೇಕು ಎಂಬ ದೃಷ್ಟಾಂತಗಳನ್ನು ನೀವು ಕೊಡಬಹುದು. ಉದಾಹರಣೆಗಾಗಿ, ಓಟದ ಮೈದಾನದಲ್ಲಿ ವೇಗವಾಗಿ ಓಡುವವರಿಗಿಂತ ಹೆಚ್ಚು ವೇಗವಾಗಿ ಓಡದವನು ಅದರಲ್ಲಿ ಪ್ರವೇಶಿಸನು, ಮತ್ತು ಆತನು ವಿಜಯಶಾಲಿಯ ಕಿರೀಟ ವನ್ನೂ ಹೊಂದನು (ನೋಡಿರಿ 2 ತಿಮೋಥೆ 2:5; 1 ಕೊರಿಂಥ 9:24). ನಿಮ್ಮ ವಿದ್ಯಾರ್ಥಿಗಳು ಅರ್ಥೈಸಿಕೊಳ್ಳುವಂತ ಉದಾಹರಣೆಗಳನ್ನು ಕೊಡಿರಿ. [32]ದೇವರ ಕೃಪೆಗಾಗಿ ಆತನಿಗೆ ಸ್ತೋತ್ರ (ರೋಮಾಪುರ 6:23)! [33]McGarvey and Pendleton, 268. [34]ಕ್ರೈಸ್ತತ್ವದ ಆಳವನ್ನು ಅಲ್ಪಮನದವರು ಎಂದೂ ತಿಳಿಯರು. [35]ನಾನು ಕೈಚಲನೆಯನ್ನು ಅಲ್ಪವಾಗಿ ತಿದ್ದಿಕೊಂಡೆನು; "ದೇವರ ವಾಕ್ಯ" ಎಂದು ಹೇಳುವಾಗ ನಾನು ನನ್ನ ಕೈಯನ್ನು ತೆರೆದ ಪುಸ್ತಕದಂತೆ ಹಿಡಿದುಕೊಂಡೆನು, ಮತ್ತು "ಆತನ ಚಿತ್ತದಂತೆ ನಾವು ಮಾಡುವಾ" ಎಂದು ಹೇಳುವಾಗ ಅದನ್ನು ಪೂರ್ವದಲ್ಲಿ ಚರ್ಚಿಸುವವನಾಗಿದ್ದೇನೆ. [36]ಈ ಪುಸ್ತಕದ ಮೊದಲಲ್ಲಿ ಸಿಕ್ಕುವ "ಅಧಿಕಾರ ಹೊಂದಿದವನು" ಎಂಬ ಪಾಠದಲ್ಲಿನ ಮಾರ್ಕ 1:22ರಲ್ಲಿ "ಶಾಸ್ತ್ರಿಗಳಂತೆರದೆ" ಎಂಬುದರ ವಿಷಯವಾಗಿನ ಟಿಪ್ಪಣಿಯನ್ನು ನೋಡಿರಿ.